ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.**

**ಸಂ: ಎಸ್1/ವಾ.ಪ/ವಾ.ಪ.ನ.ಬಗ್ಗೆ/09/2021-22** **ದಿನಾಂಕ: 21/04/2021**

**ಜ್ಞಾಪನ**

**ವಿಷಯ:** ಏಪ್ರಿಲ್/ಮೇ 2021ರ ವಾಣಿಜ್ಯ ಪರೀಕ್ಷೆಗಳನ್ನು ಮುಂದೂಡಿರುವ ಬಗ್ಗೆ.

**ಉಲ್ಲೇಖ:** 1) ಎಸ್/ವಾ.ಪ/ಅಧಿ.ಸು.ಜ್ಞಾ/38/2020-21 ದಿನಾಂಕ: 22/02/2021

2) ಎಸ್1/ವಾ.ಪ/ವೇಳಾಪಟ್ಟಿ/ಏಪ್ರಿಲ್-2021/53/2020-21 ದಿನಾಂಕ:30/03/2021

3) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: RD 158 TNR 2020

DATED: 20/04/2021

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಏಪ್ರಿಲ್/ಮೇ-2021ರ ವಾಣಿಜ್ಯ ಪರೀಕ್ಷೆಗಳನ್ನು ಉಲ್ಲೇಖ(1)(2)ರಂತೆ ದಿನಾಂಕ: 19/04/2021 ರಿಂದ ಪ್ರಾರಂಭಿಸಲಾಗಿತ್ತು. ಪ್ರಸ್ತುತ ಕೋವಿಡ್-19ರ ಪ್ರಕರಣಗಳು ದಿನೇದಿನೇ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖ(3)ರ ಸರ್ಕಾರ ಮಾರ್ಗಸೂಚಿಯಲ್ಲಿ ಕೋವಿಡ್-19ರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹಲವು ನಿರ್ಬಂಧಗಳನ್ನು ವಿಧಿಸಲಾಗಿರುತ್ತದೆ. ಆದ್ದರಿಂದ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಆರೋಗ್ಯ ಮತ್ತು ಸುರಕ್ಷತೆಯ ದೃಷ್ಟಿಯಿಂದ ದಿನಾಂಕ: 22/04/2021 ರಿಂದ ನಡೆಯಬೇಕಾಗಿದ್ದ ವಾಣಿಜ್ಯ ಪರೀಕ್ಷೆಯ ಶೀಘ್ರಲಿಪಿ, ಮುದ್ರಣ ಹಾಗೂ ಬರವಣಿಗೆ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಪರೀಕ್ಷೆ ಮುಂದೂಡಲಾಗಿರುವ ವಿಷಯವನ್ನು ಸಂಬಂಧಿಸಿದ ಎಲ್ಲಾ ಸಂಸ್ಥೆಗಳು ಹಾಗೂ ಅಭ್ಯರ್ಥಿಗಳಿಗೆ ತಿಳಿಸಲು ಈ ಮೂಲಕ ಸೂಚಿಸಿದೆ.

ಮುಂದೂಡಲಾಗಿರುವ ವಾಣಿಜ್ಯ ಪರೀಕ್ಷೆಗಳನ್ನು ನಡೆಸುವ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ಈ ಬಗ್ಗೆ ಮಾಹಿತಿಯನ್ನು ಮಂಡಳಿಯ ಜಾಲತಾಣ www.kseeb.kar.nic.in ದಲ್ಲಿ ಪ್ರಕಟಿಸಲಾಗುವುದು.

***(ಮಾನ್ಯ ಆಯುಕ್ತರು, ಸಾ.ಶಿ.ಇ. ಬೆಂಗಳೂರುರವರ ಆದೇಶದ ಮೇರೆಗೆ)***

21/4/2021

(ಎಸ್.ಗೀತಾ)
ನಿರ್ದೇಶಕರು,
ಇತರೆ ಪರೀಕ್ಷೆಗಳು.

**ಪ್ರತಿಯನ್ನು,**

1) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ)ಬೆಂಗಳೂರುರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3) ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು ಹಾಗೂ ವಾಣಿಜ್ಯ ಪರೀಕ್ಷೆಯ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ,
4) ವಾಣಿಜ್ಯ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರುಗಳಿಗೆ,
5) ಕಛೇರಿ ಪ್ರತಿ.